**ಓ.ಎಸ್. ನಂ. 146/2022** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 13.6.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ಶ್ರೀ ಜಿ.ವಿ.ಜಿ ವಕೀಲರಿಂದಃ

ಲೇಟ್ ಮಾದೇಗೌಡ ವಾಸವಾಗಿದ್ದ ಮನೆ ಹಾಗೂ ನನ್ನ ತಂದೆ ಮತ್ತು ತಾತನ ಮನೆ ಅಕ್ಕಪಕ್ಕದಲ್ಲಿದ್ದವು ಎಂದರೆ ಸಾಕ್ಷಿದಾರರು ಒಂದೇ ರಸ್ತೆಯಲ್ಲಿತ್ತು ಎನ್ನುವರು. ಸದರಿ ಮಾದೇಗೌಡರ ಮನೆಯಲ್ಲಿ ಎಷ್ಟು ಜನ ಇದ್ದರು ಹಾಗೂ ನನ್ನ ತಂದೆ ಹಾಗೂ ಅಜ್ಜನ ಮನೆಯಲ್ಲಿ ಎಷ್ಟು ಜನ ಇದ್ದರು ಎಂದು ಪರಸ್ಪರ ಗೊತ್ತಿತ್ತು ಎಂದರೆ ಸರಿ. ಲೇಟ್ ಮಾದೇಗೌಡರಿಗೆ ಗಂಡು ಮಕ್ಕಳು ಇರಲಿಲ್ಲ, 7 ಜನ ಹೆಣ್ಣು ಮಕ್ಕಳು ಮಾತ್ರ ಇದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಅವರ 7 ನೇ ಮಗಳಾದ ಸಾವಿತ್ರಮ್ಮ ರವರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ 7 ನೇ ಮಗಳಾದ ಸಾವಿತ್ರಮ್ಮ ರವರ ಗಂಡನಾದ ಚಂದ್ರಮೋಹನ್ ರವರನ್ನು ಸದರಿ ಮಾದೇಗೌಡರು ದತ್ತು ಪಡೆದುಕೊಂಡಿದ್ದರು ಎಂದರೆ ಸರಿ. ನಿಪಿ24 ರ ಪೂರ್ವದಲ್ಲಿ ಸರ್ವೆ ನಂ.20/1 ರ 8-13 ಎಕರೆ ಹಾಗೂ 20/2 ರ 5-20 ಎಕರೆ ಜಮೀನನ್ನು ಸದರಿ ಚಂದ್ರಮೋಹನ್ ರವರು ವ್ಯವಸಾಯ ಮಾಡುತ್ತಿದ್ದರು ಎಂದರೆ ಸಾಕ್ಷಿದಾರರು ಸ್ವಲ್ಪ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರು, ಉಳಿದ ಜಮೀನು ಪಾಳು ಬಿದ್ದಿತ್ತು ಎನ್ನುವರು. ಸರ್ವೆ ನಂ. 20/3 ರಲ್ಲಿ 3-20 ಎಕರೆ ಜಮೀನನ್ನು ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು ಎಂದರೆ ಸಾಕ್ಷಿದಾರರು ಆರುವರೆ ಎಕರೆ ಜಮೀನನ್ನು ವ್ಯವಸಾಯ ಮಾಡುತ್ತಿದ್ದರು ಎನ್ನುವರು. ನನ್ನ ತಂದೆ 1999 ರಲ್ಲಿ ಖಾತೆ ಮಾಡಿಸಿಕೊಂಡಾಗ ನನಗೆ 3-20 ಎಕರೆ ಜಮೀನಿನ ಪರಿಜ್ಞಾನ ಇತ್ತು ಎಂದರೆ ಸಾಕ್ಷಿದಾರರು ಗೊತ್ತಿರಲಿಲ್ಲ ಎನ್ನುವರು. ನನ್ನ ತಂದೆ 3-20 ಎಕರೆ ಜಮೀನಿನ ದಾನಪತ್ರವಾಗಿರುತ್ತದೆ ಎಂದು ಅರ್ಜಿ ನೀಡಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ಆ ಬಗ್ಗೆ ಮಾಹಿತಿ ಇರುವುದಿಲ್ಲ ಎನ್ನುವರು. ದುರಸ್ತಿಯಾದ ನಂತರ ಸರ್ವೆ ನಂ.20/3 ರಲ್ಲಿ 3-20 ಎಕರೆ ಜಮೀನಿನ ಪಹಣಿಯು ನನ್ನ ತಾಯಿಯ ಹೆಸರಿಗೆ ಆಗಿರುತ್ತದೆ ಎಂದರೆ ಸಾಕ್ಷಿದಾರರು ಪ್ರತಿವಾದಿಯರು ಆಸ್ತಿಯ ಅದಲು ಬದಲಾಗಿರುತ್ತದೆ, ಸರಿಪಡಿಸಬೇಕೆಂದು ನನ್ನ ತಾಯಿಗೆ ಗೊತ್ತಿಲ್ಲದಂತೆ ಸಹಿ ಪಡೆದುಕೊಂಡಿರುತ್ತಾರೆ ಎನ್ನುವರು. ಎ.ಡಿ.ಎಲ್.ಆರ್ ರವರು ನೀಡಿರುವ ಹಿಂಬರಹದ ಮೇಲೆ ಡಿ.ಡಿ.ಎಲ್.ಆರ್ ಕಛೇರಿಗೆ ನನ್ನ ತಾಯಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿದಾರರು ಅದಲು ಬದಲಾಗಿರುತ್ತದೆ, ಸರಿ ಮಾಡಬೇಕೆಂದು ಸಹಿ ಪಡೆದುಕೊಂಡಿದ್ದು ನಂತರ ಸರ್ವೆಯರ್ ಅಳತೆಗೆ ಬಂದಾಗ ಗೊತ್ತಾಗಿರುತ್ತದೆ ಎನ್ನುವರು. ಡಿ.ಡಿ.ಎಲ್.ಆರ್ ರವರ ಆದೇಶದವಾದ ನಂತರ ಅರ್ಜಿ ನೀಡಿರುವ ಬಗ್ಗೆ ಗೊತ್ತಾಗಿರುತ್ತದೆ. ನನ್ನ ತಾಯಿಯು ಸಹ ಡಿ.ಡಿ.ಎಲ್.ಆರ್ ಸಮಕ್ಷಮ ಅವರ ಕಛೇರಿಯಲ್ಲಿ ಆಸ್ತಿಯನ್ನು ದುರಸ್ತಿ ಮಾಡಿಸಿಕೊಂಡಿ ಎಂದು ಅರ್ಜಿಗೆ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಸಹಿ ಮಾಡಿರುತ್ತಾರೆ, ಆದರೆ ಮಾಹಿತಿಯನ್ನು ನೀಡದೆ ಸಹಿ ಪಡೆದುಕೊಂಡಿರುತ್ತಾರೆ ಎನ್ನುವರು. ಸರ್ವೆಯರ್ ಅಳತೆಗೆ ಬಂದಾಗ

ಆ ರೀತಿ ಮಾಹಿತಿ ನೀಡದೆ ಸಹಿ ಪಡೆದುಕೊಂಡಿರುವ ಬಗ್ಗೆ ಗೊತ್ತಾಗಿರುತ್ತದೆ. ಆ ರೀತಿ ಗೊತ್ತಾದ ನಂತರ ಪುನಃ ಜೆ.ಡಿ.ಎಲ್.ಆರ್ ರವರ ಮುಂದೆ ದೂರು ನೀಡಿರುವುದಿಲ್ಲ. ನನ್ನ ತಾಯಿ ಎ.ಡಿ.ಎಲ್.ಆರ್ ರವರು ಹಿಂಬರಹ ನೀಡುವ ಪೂರ್ವದಲ್ಲಿ ತಾಲ್ಲೂಕು ಕಛೇರಿಗೆ 3-20 ಎಕರೆ ಜಮೀನಿನ ತತ್ಕಾಲ್ ಪೋಡಿಗೆ ಅರ್ಜಿ ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ಮಾಹಿತಿ ನೀಡದೇ ನನ್ನ ತಾಯಿಯ ಸಹಿಯನ್ನು ಮಾಡಿಸಿಕೊಂಡಿರುತ್ತಾರೆ ಎನ್ನುವರು. ತಾಲ್ಲೂಕು ಸರ್ವೆಯರ್ ರವರು ಪಹಣಿಯಲ್ಲಿ ವ್ಯತ್ಯಾಸ ಇರುತ್ತದೆ ಎಂದು ಹಿಂಬರಹ ನೀಡಿದ ನಂತರ ನನ್ನ ತಾಯಿ ಡಿ.ಡಿ.ಎಲ್.ಆರ್ ಕಛೇರಿಯಲ್ಲಿ ಪಹಣಿ ದುರಸ್ತಿ ಮಾಡಲು ಅರ್ಜಿ ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ತಾಯಿಗೆ ಗೊತ್ತಿಲ್ಲದಂತೆ ಸಹಿ ಮಾಡಿಸಿಕೊಂಡಿರುತ್ತಾರೆ ಎನ್ನುವರು. ತಾಲ್ಲೂಕು ಸರ್ವೆಯರ್ ಅಳತೆಗೆ ಬಂದಾಗ ನನ್ನ ತಾಯಿ, 2, 7 ನೇ ಪ್ರತಿವಾದಿ ಹಾಗೂ ಗ್ರಾಮಸ್ಥರು ಮಹಜರಿಗೆ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಸಹಿ ಮಾಡಿರುತ್ತಾರೆ, ಆದರೆ ನನ್ನ ತಾಯಿಗೆ ಯಾವ ವಿಚಾರ ಎಂದು ಮಾಹಿತಿ ಇರುವುದಿಲ್ಲ ಎನ್ನುವರು.

1945 ರಲ್ಲಿ ನನ್ನ ತಾತ ಕೆಂಪಮಾಲೇಗೌಡ ರವರು ನನ್ನ ತಂದೆ ಕೆಂಪಮಾಲೇಗೌಡ ರವರಿಗೆ ದಾನಪತ್ರ ಮಾಡಿರುವ ವಿಚಾರ ನನಗೆ ಗೊತ್ತಿರುತ್ತದೆ. ಸದರಿ ದಾನಪತ್ರದಲ್ಲಿ 3-20 ಎಕರೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸದರಿ ದಾನಪತ್ರದಲ್ಲಿ ನನ್ನ ತಾತ ಸ್ವಾಧೀನದಲ್ಲಿದ್ದ ಸ್ಥಿರ ಹಾಗೂ ಚರ ಆಸ್ತಿಗಳ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನನ್ನ ತಾತ ದಾನಪತ್ರದಲ್ಲಿ ನಮೂದಿಸಿರುವ ಆಸ್ತಿಗಳ ಮೇಲೆ ಮಾತ್ರ ನಮಗೆ ಹಕ್ಕು ಇರುತ್ತದೆ ಎಂದರೆ ಸಾಕ್ಷಿದಾರರು ನನ್ನ ತಾತ ಕೆಂಪಮಾಲೇಗೌಡ ರವರು ದಾನಪತ್ರ ಮಾಡಿದ ನಂತರ ಅದೇ ಸರ್ವೆ ನಂಬರಿನಲ್ಲಿ ಆಸ್ತಿ ಉಳಿದಿದ್ದು ನನ್ನ ತಾತ ಬೇರೆ ಯಾವುದೇ ದಾಖಲಾತಿಯನ್ನು ಮಾಡದಿರುವುದರಿಂದ ಉಳಿದ ಆಸ್ತಿ ಸಹ ನನ್ನ ತಂದೆಗೆ ಸೇರುತ್ತದೆ ಎನ್ನುವರು. ನನ್ನ ತಾತರವರು ಮಾದೇಗೌಡರಿಗೆ ಕ್ರಯ ಮಾಡಿ ಉಳಿದ ಆಸ್ತಿಯನ್ನು ನನ್ನ ತಂದೆಗೆ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ಮಾದೇಗೌಡರಿಗೆ 4-20 ಎಕರೆಯನ್ನು ಮಾತ್ರ ಮಾರಾಟ ಮಾಡಿರುತ್ತಾರೆ ಎನ್ನುವರು. 2009 ರಲ್ಲಿ ನನ್ನ ತಾಯಿ ಸರಗೂರಿನ ಎಸ್.ಬಿ.ಎಂ ಬ್ಯಾಂಕಿನಲ್ಲಿ ಸಾಲ ಪಡೆದ ಸಮಯದಲ್ಲಿ ಸಹ ಉಳಿದ ಆಸ್ತಿಯ ಖಾತೆ ಮಾಡಿಕೊಡಿ ಎಂದು ಅರ್ಜಿ ನೀಡಿರುವುದಿಲ್ಲ. 1936 ರಲ್ಲಿ ಮಾದೇಗೌಡರಿಗೆ ಬರೆದುಕೊಟ್ಟಿರುವ ನಿಪಿ7 ಕ್ರಯಪತ್ರದಲ್ಲಿರುವ ವಿಚಾರವನ್ನು ತಿಳಿದುಕೊಂಡಿರುತ್ತೇನೆ. ಸದರಿ ದಾಖಲೆಯಲ್ಲಿ "1936 ರ ಮಾರ್ಚ ನಲ್ಲಿ ನಿಮಗೆ ಖರೀದಿಗೆ ಕೊಟ್ಟಿರುವ ಪಶ್ಚಿಮ ಭಾಗದ ಬಾಬ್ತು 9 ಎಕರೆ ಜಾತ ಉಳಿಕೆ 8 ಎಕರೆ ಪೈಕಿ ನಿಮ್ಮ ಜಮೀನಿಗೆ ಸೇರಿದ ಹಾಗೆ ಪೂರ್ವ ಭಾಗದಲ್ಲಿ ದಕ್ಷಿಣೋತ್ತರವಾಗಿ 4-20 ಎಕರೆ" ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ಸರ್ವೆ ನಂ.20/3 ರಲ್ಲಿ 3-20 ಎಕರೆ ಜಮೀನನ್ನು ಮಾತ್ರ ಸ್ವಾಧೀನವನ್ನು ಹೊಂದಿದ್ದು, ಅಕ್ರಮ ಲಾಭ ಪಡೆಯಲು ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ7 ರಂತೆ ಕ್ರಯಪತ್ರವಾದಾಗ ಹಾಗೂ ನನ್ನ ತಂದೆಗೆ ದಾನಪತ್ರವಾದಾಗ ಆಸ್ತಿಯ ಸರ್ವೆ ನಂ.20 ಆಗಿದ್ದು, ಈಗ ಅದು ದುರಸ್ತಿಯಾಗಿ 20/1, 20/2 ಮತ್ತು

20/3 ಆಗಿರುತ್ತದೆ ಎಂದರೆ ಸರಿ. ಮಾದೇಗೌಡರವರು ನನ್ನ ತಾತ ಕೆಂಪಮಾಲೇಗೌಡರಿಂದ ಖರೀದಿ ಮಾಡಿರುವ 9 ಎಕರೆ ಮತ್ತು 4-20 ಎಕರೆ ಆಸ್ತಿಯನ್ನು ಸೇರಿಸಿ ಒಟ್ಟಿಗೆ ಖಾತೆ ಮಾಡಿಕೊಂಡಿಸಿರುತ್ತಾರೆ ಎಂದರೆ ಸಾಕ್ಷಿದಾರರು ಬೇರೆ ಬೇರೆ ಖಾತೆ ಮಾಡಿಸಿಕೊಂಡಿರುತ್ತಾರೆ ಎನ್ನುವರು. ಅಕ್ರಮ ಲಾಭ ಪಡೆಯಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.